ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಯಲ್ಲಿನ ಪಂಚಾಯ್ತಿ ವಿಸ್ತರಣಾಧಿಕಾರಿ ಹುದ್ದೆಗಳ ಭರ್ತಿ.

99(1292) ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2004–05ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳಿಗೆ ರಾಜ್ಯ ಬಿಡುಗಡೆ ಮಾಡಿದ ಅನುದಾನ ಎಷ್ಟು?

ಆ. ಈ ಬಾಬ್ತು ಉಳಿದಿರುವ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಇ. ಈ ಅನುದಾನದಲ್ಲಿ ಬಹುತೇಕ ಹಣವು ಕುಡಿಯುವ ನೀರು, ದಾರಿದೀಪ, ವಿದ್ಯುತ್ ಬಿಲ್ಲು ಪಾವತಿಗೆ ಖರ್ಚು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಬಂದಿದ್ದಲ್ಲಿ, ಇಂತಹ ನೀರಿನ ವಿದ್ಯುತ್ತಿನ ಬಿಲ್ಲುಗಳನ್ನು ಸರ್ಕಾರವೇ ಪಾವತಿಸಲು ಇರುವ ತೊಂದರೆಗಳೇನು?

ಉ. ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳಲಾಗುತ್ತದೆ?

ಊ. ಈ ಇಲಾಖೆಯಲ್ಲಿ ಇರುವ ಪಂಚಾಯ್ತಿ ವಿಸ್ತರಣಾಧಿಕಾರಿಗಳ ಹುದ್ದೆಗಳೆಷ್ಟು ಹಾಗೂ ಎಷ್ಟು ಮಂಜೂರಾತಿ ಆಗಿವೆ (ಜಿಲ್ಲಾವಾರು ವಿವರ ನೀಡುವುದು)? ಈ ಪೈಕಿ ಖಾಲಿ ಇರುವ ಹುದ್ದೆಗಳೆಷ್ಟು; ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಋ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಕೊರೆದಿರುವ ಕೊಳವೆ ಬಾವಿಗಳು ಎಷ್ಟು? ಇದರಲ್ಲಿ ಉಪಯೋಗಕ್ಕೆ ಬರುತ್ತಿರುವ ಹಾಗೂ ನಿಂತಿರುವುದೆಷ್ಟು? (ತಾಲ್ಲೂಕುವಾರು ವಿವರ ನೀಡುವುದು);

ೠ. ಇವುಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಲು ಕಾರಣಗಳೇನು?

ಎ. ಇವುಗಳ ಪುನಶ್ಚೇತನಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಏ. ಜಿಲ್ಲೆಯಲ್ಲಿ ಗ್ರಾಮಾಂತರ ಕುಡಿಯುವ ನೀರು ಹಾಗೂ ರಸ್ತೆ ಅಭಿವೃದ್ಧಿ ಯೋಜನೆಗೆ ಹಮ್ಮಿಕೊಂಡಿರುವ ಕಾರ್ಯಗಳೇನು? ಈ ಕಾರ್ಯಗಳನ್ನು ಯಾವಾಗ ಅನುಷ್ಠಾನ ಗೊಳಿಸಲಾಗುತ್ತದೆ?

ಡಾ.ಹೆಚ್.ಪಿ.ಮಹಾದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ. 2004–05 ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯತಿಗೆ ನಿಗಧಿಪಡಿಸಿರುವ ರೂ.5.00 ಲಕ್ಷಗಳ ಶಾಸನಬದ್ಧ ಅನುದಾನದಲ್ಲಿ, ಇದುವರೆಗೆ ರೂ.2.49 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ. ರೂ.0.83 ಲಕ್ಷಗಳನ್ನು ಫೆಬ್ರವರಿ ಮಾಹೆಯಲ್ಲಿ ಬಿಡುಗಡೆ ಮಾಡಲಾಗುವುದು. ಉಳಿದ ಹಣವನ್ನು ಆರ್ಥಿಕ ವರ್ಷಾಂತ್ಯದೊಳಗೆ ಬಿಡುಗಡೆ ಮಾಡಲಾಗುವುದು.

ಇ. ಬಂದಿರುತ್ತದೆ.

ಈ. ಗ್ರಾಮ ಪಂಚಾಯತಿಗಳು ಉಪಯೋಗಿಸುವ ವಿದ್ಯುಚ್ಛಕ್ತಿಗೆ ತಗಲುವ ಖರ್ಚುವೆಚ್ಚವನ್ನು ಸಂಬಂಧಿಸಿದ ಪಂಚಾಯತಿಗಳೇ ಭರಿಸಬೇಕೆಂಬುದು ಸರ್ಕಾರದ ನಿಲುವಾಗಿರುತ್ತದೆ.

ಉ. ಪ್ರಶ್ನೆ ಉದ್ಭವಿಸುವುದಿಲ್ಲ.

ಊ. ಈ ಇಲಾಖೆಯಲ್ಲಿ 350 ಪಂಚಾಯಿತಿ ವಿಸ್ತರಣಾಧಿಕಾರಿಗಳ ಹುದ್ದೆ ಮಂಜೂರಾಗಿರುತ್ತದೆ. ಈ ಪೈಕಿ 161 ಹುದ್ದೆಗಳು ಖಾಲಿಯಿರುತ್ತವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಲಾಗಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಪರಿಶೀಲಿಸಲಾಗುವುದು.

ಋ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆಗಳಿಗಾಗಿ ಕೊರೆದಿರುವ ಕೊಳವೆ ಬಾವಿಗಳ ವಿವರ ಈ ರೀತಿ ಇದೆ.

ತಾಲ್ಲೂಕು	ಕೊರೆದ ಕೊಳವೆ	ಉಪಯೋಗಕ್ಕೆ ಬರುತ್ತಿರುವುದು	ನಿಂತಿರುವುದು
1	2	3	4
ಮಂಗಳೂರು	2094	1726	368
ಬಂಟ್ವಾಳ	1739	1503	236
ಪುತ್ತೂರು	1794	1640	154
ಸುಳ್ಯ	876	1640	52
ಬೆಳ್ತಂಗಡಿ	1227	1098	129
ಒಟ್ಟು	7730	6791	939

ಋೂ. ನೀರಿನ ಅಂತರ್ಜಲ ಮಟ್ಟ ಕುಸಿದಿರುವುದರಿಂದ ನೀರಿನ ಪ್ರಮಾಣ ಕಡಿಮೆಯಾಗಿದೆ.

ಎ. ಅಂತರ್ಜಲ ಮಟ್ಟ ಹೆಚ್ಚಿಸುವ ಸಲುವಾಗಿ ಕಿಂಡಿ ಅಣೆಕಟ್ಟುಗಳ ರಚನೆ, ಮಳೆ ನೀರು ಸಂಗ್ರಹಣೆ ಮೂಲಕ ಕೊಳವೆ ಬಾವಿ, ತೆರೆದ ಬಾವಿಗಳ ಅಂತರ್ಜಲ ಮಟ್ಟ ಹೆಚ್ಚಿಸುವುದು, ಕೆರೆಗಳ ಹೂಳೆತ್ತುವುದು, ಕೃಷಿ ಕೊಳಗಳ ನಿರ್ಮಾಣ, ತೆರೆದ ಬಾವಿ, ತಡೆಗೋಡೆಗಳ ರಚನೆ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಏ. ಕುಡಿಯುವ ನೀರಿಗಾಗಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು (ರಾಜ್ಯ), ತ್ವರಿತ ಗ್ರಾಮೀಣ ನೀರು ಸರಬರಾಜು ಕೇಂದ್ರ, ಕನಿಷ್ಟ ಅವಶ್ಯಕ ಕಾರ್ಯಕ್ರಮ, ಬರ ಪರಿಹಾರ ಯೋಜನೆ, ವಲಯ ಸುಧಾರಣೆ ಯೋಜನೆ, ಹಾಗೂ ಸ್ವಜಲಧಾರಾ ಯೋಜನೆಯಡಿಯಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ರಸ್ತೆ ಅಭಿವೃದ್ಧಿಗಾಗಿ ಜಿಲ್ಲಾ ಪಂಚಾಯತ್ ಕ್ರಿಯಾ ಯೋಜನೆಯಡಿ ಕಾರ್ಯಕ್ರಮ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗಳು, ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ನಿಧಿ ಹಾಗೂ ನಬಾರ್ಡ್ ಯೋಜನೆಯಡಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಎಲ್ಲಾ ಕಾರ್ಯಕ್ರಮಗಳನ್ನು ಆಯಾ ವರ್ಷದ ಅನುದಾನಕ್ಕೆ ತಕ್ಕಂತೆ ಅನುಷ್ಟಾನಗೊಳೀಸಲಾಗುತ್ತಿದೆ.

ಪಂಚಾಯಿತಿ ವಿಸ್ತರಣಾಧಿಕಾರಿಗಳ ಹುದ್ದೆಗಳ ವಿವರ

ಕ್ರ.ಸಂ.	ಜಿಲ್ಲಾ ಪಂಚಾಯಿತಿ ಹೆಸರು	ಮಂಜೂರಾದ ಒಟ್ಟು ಹುದ್ದೆಗಳು	ಭರ್ತಿ ಮಾಡಲಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1.	ಬೆಂಗಳೂರು(ನಗರ)	7	6	1
2.	ಬೆಂಗಳೂರು(ಗ್ರಾಮಾಂತರ)	14	5	09
3.	ಕೋಲಾರ	17	4	13
4.	ತುಮಕೂರು	21	8	13
5.	ಚಿತ್ರದುರ್ಗ	12	7	5
6.	ದಾವಣಗೆರೆ	14	9	5
7.	ಶಿವಮೊಗ್ಗ	16	11	5
8.	ಮೈಸೂರು	16	3	13
9.	ಚಾಮರಾಜನಗರ	8	4	4
10.	ಮಂಡ್ಯ	15	2	13
11.	ಹಾಸನ	18	2	16
12.	ಕೊಡಗು	6	4	2
13.	ಚಿಕ್ಕಮಗಳೂರು	14	6	8
14.	ದ.ಕ.ಜಿಲ್ಲೆ	14	7	7
15.	ಉಡುಪಿ	10	4	6
16.	ಬೆಳಗಾವಿ	29	21	8
17.	ಬಾಗಲಕೋಟೆ	9	6	3
18.	ಬಿಜಾಪುರ	14	11	3
19.	ಧಾರವಾಡ	7	4	3
20.	ಗದಗ್	5	4	21
21.	ಹಾವೇರಿ	12	9	3
22.	ಉ.ಕ.ಜಿಲ್ಲೆ	12	8	4
23.	ಗುಲ್ಬರ್ಗಾ	21	18	3
24.	ಬಳ್ಳಾರಿ	10	7	3
25.	ಬೀದರ್	11	8	3
26.	ಕೊಪ್ಪಳ	8	5	3
27.	ರಾಯಚೂರು	10	6	4
	ಒಟ್ಟು	350	189	161

ಶ್ರೀಮತಿ ಶಕುಂತಲ ಟಿ ಶಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕಳುಹಿಸಿದ್ದಾರೆ, ಪ್ರತಿ ಪಂಚಾಯಿತಿಗೆ ಐದು ಲಕ್ಷ ರೂಪಾಯಿಗಳನ್ನು ಶಾಸನಬದ್ಧ ಅನುದಾನದಲ್ಲಿ ಇದುವರೆಗೆ 2.49 ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು ಕೊಟ್ಟಿದ್ದಾರೆ. ಆದರೆ ನಮ್ಮ ಕಡೆಯ ಯಾವುದೇ ಪಂಚಾಯತಿಗಳಿಗೆ ಎರಡೂವರೆ ಲಕ್ಷ ರೂಪಾಯಿಗಳು ಬಂದಿವೆ ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. 83 ಲಕ್ಷ ರೂಪಾಯಿಗಳು ಇದೇ ತಿಂಗಳಲ್ಲಿ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಇದೇ ತಿಂಗಳು ಚುನಾವಣೆ ಘೋಷಣೆ ಆಗಿದೆ, ಹಣ ಬರುತ್ತದೆಯೊ ಇಲ್ಲವೋ ಅದು ಗೊತ್ತಿಲ್ಲ.

ಡಾ ಹೆಚ್ ಪಿ.ಮಹಾದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಖಜಾನೆ ಮೂಲಕ 1.38 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಗ್ರಾಮ ಪಂಚಾಯಿತಿ ಪರವಾಗಿ ಕೆಪಿಟಿಸಿಎಲ್ ಕಾಸ್ಟ್ 1.81ಲಕ್ಷ ರೂ ಕೊಟ್ಟಿದ್ದೇವೆ. ಸುಮಾರು 78 ಕೋಟಿ ರೂಪಾಯಿಗಳು 103 ಕೋಟಿ ರೂ ಇಡೀ ರಾಜ್ಯಕ್ಕೆ ಕೊಟ್ಟಿದ್ದೇವೆ. ಸರ್ಕಾರದಿಂದ ನೇರವಾಗಿ ಬ್ಯಾಂಕುಗಳಿಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಅದು 57 ಕೋಟಿ ರೂಪಾಯಿ ಹೋಗಿದೆ. ಆರ್ಥಿಕ ಇಲಾಖೆಯ ಅಂತಿಮ ಹೊಂದಾಣಿಕೆ ನೀಡಿದ ಪಾವತಿ ಹಣದಲ್ಲಿ 0.81 ಲಕ್ಷ ರೂಪಾಯಿ, 45 ಕೋಟಿ ರೂ ಇದೆ. ಇದನ್ನು ಈ ರೀತಿಯಲ್ಲಿ ಎಲ್ಲಾ ಪಂಚಾಯಿತಿಗಳಿಗೆ ಕಳುಹಿಸಿಕೊಟ್ಟಿದ್ದೇವೆ. ಈ ಬಾಕಿ ಬರಬೇಕಾಗಿರುವ ಹಣವನ್ನು ಚುನಾವಣೆ ದೃಷ್ಟಿಯಿಂದ ಏನು ನಿಲ್ಲಿಸಿದ್ದೇವೆ ಅದನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ಸಚಿವರು ಗಮನಿಸಬೇಕು. ನಾನು ಉಡುಪಿ ಮಂಗಳೂರಿಗೆ ಹೋಗಿದ್ದೆ, ಕೆಪಿಟಿಸಿಎಲ್‌ಗೆ ಸ್ವಲ್ಪ ಭಾಗದ ಹಣವನ್ನು ಅಡ್ಜಸ್ಟ್ ಮಾಡಿಕೊಂಡಿದ್ದಾರೆ. ಗ್ರಾಮ ಪಂಚಾಯಿತಿಯವರು ಕೆಪಿಟಿಸಿಎಲ್‌ಗೆ ಹಣ ಕೊಟ್ಟಿದ್ದಾರೆ. ಕಣ್ಣು ಮುಚ್ಚಿಕೊಂಡು ಇಡೀ ರಾಜ್ಯದ ಪಂಚಾಯಿತಿಗಳು ಹಣ ಕೊಟ್ಟಿದ್ದರೂ ಸಹ ಕೆಪಿಟಿಸಿಎಲ್‌ಗೆ ಜಮಾ ಮಾಡಿಕೊಂಡಿದ್ದಾರೆ. ಇದು ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಆಗಿರುವ ಬಗ್ಗೆ ನೂರಾರು ಉದಾಹರಣೆಗಳನ್ನು ನಾನು ಕೊಡುತ್ತೇನೆ. ಪ್ರತ್ಯಕ್ಷ ಆಗಿದೆ. ನಿಮ್ಮ ದುಡ್ಡು ಕಟ್ ಮಾಡಿಕೊಳ್ಳಬೇಕಾದರೆ ಅಭಿವೃದ್ಧಿ ಕಾರ್ಯಕ್ಕೆ ಅಂತ ಹಣ ಕೊಟ್ಟು ಅವರು ಕಟ್ಟಿದ ಮೇಲೆ ನೀವು ಹೇಗೆ ಕಟ್ ಮಾಡಿದಿರಿ? ಇದು ಹೌದು ಅಲ್ಲ ಮೊದಲನೆಯದು. ಎರಡನೆಯದು ನೀವು ಉತ್ತರ ಕೊಟ್ಟಿದ್ದೀರಿ, ಇನ್ನು ಎರಡು ತಿಂಗಳುಗಳು ಕಳೆದರೆ ಈ ವರ್ಷ ಮುಗಿಯುತ್ತದೆ. ನಾವು ಈಗ ಫೆಬ್ರವರಿಯಲ್ಲಿದ್ದೇವೆ. ನೀವು ಏಕೆ ಇಮ್ಮಿಡಿಯಟ್ ಹಣ ಕೊಡುವುದಿಲ್ಲ. ಅದು ಏಕೆ ಕಟ್ ಮಾಡುವುದಕ್ಕೆ ಹೋಗುತ್ತೀರಿ? ಹಣಕಾಸು ಸಚಿವರು ನನ್ನ ಹತ್ತಿರ ಹಣಕಾಸು ತುಂಬಿ ತುಳುಕುತ್ತಿದೆ ನನ್ನ ಬೊಕ್ಕಸದಲ್ಲಿ ಎಂದು ಹೇಳುತ್ತಿದ್ದಾರೆ. ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡುತ್ತೀರಿ, ಹೋದ ವರ್ಷ ಐದು ಲಕ್ಷ ರೂಪಾಯಿ ಕೊಡಬೇಕಾಗಿತ್ತು, ಎರಡೂವರೆ ಲಕ್ಷ ರೂ ಮಾತ್ರ ಕೊಟ್ಟಿರಿ. ಈ ವರ್ಷ ಪೂರ್ಣ ಹಣ ಈವತ್ತು ಅಥವಾ ನಾಳೆ ಬಿಡುಗಡೆ ಮಾಡುವುದಕ್ಕೆ ಕಷ್ಟ ಏನು?

ಶ್ರೀ ಜೆ.ಸಿ.ಮಾಧುಸ್ವಾಮಿ : ಈ ಪ್ರಶ್ನೆ ತಾವಾದರೂ ಓದಬೇಕು. ಈ ಪ್ರಶ್ನೆಗೆ ನಾವು ಉತ್ತರ ನಿರೀಕ್ಷೆ ಮಾಡಬೇಕೆಂದರೆ ಇವತ್ತೆಲ್ಲಾ ಇದೊಂದೇ ಪ್ರಶ್ನೆಗೆ ಉತ್ತರ ಹೇಳಬೇಕಾಗುತ್ತೆ. ಇಷ್ಟೊಂದು ಎಕ್ಸಾಸ್ಟೀವ್ ಪ್ರಶ್ನೆ ತಾವು ಓದಲೇ ಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಎಲ್ಲದಕ್ಕೂ ಏನಾದರೂ ಒಂದು ವೇದಾಂತ ಉಪದೇಶ ಹೇಳುವುದಕ್ಕೆ ಮಾನ್ಯ ಮಾಧುಸ್ವಾಮಿಯವರು ಪ್ರಾರಂಭ ಮಾಡುತ್ತಾರೆ. ಅವರು ಉತ್ತರ ಕೊಡುತ್ತಿದ್ದಾರೆ ಇವರು ಎದ್ದು ಈ ರೀತಿ ಹೇಳುತ್ತಾರೆ.

ಅಧ್ಯಕ್ಷರು : ಕುಡಿಯುವ ನೀರಿನ ಬಗ್ಗೆ ಸಮಗ್ರವಾಗಿ ಚರ್ಚೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕೇಳುವುದು ಕುಡಿಯುವ ನೀರು ಅಲ್ಲ, ಗ್ರಾಮ ಪಂಚಾಯಿತಿಗೆ ಐದು ಲಕ್ಷ ರೂ ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳುತ್ತಿದ್ದೇನೆ. ಅವರು ಕೆಪಿಟಿಸಿಎಲ್‌ಗೆ ಕಟ್ಟಿದ್ದರೂ ಇವರು ಹೇಗೆ ಜಮಾ ಮಾಡಿಕೊಂಡರು ಎಂದು ಕೇಳುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಎಷ್ಟು ಎಂಪ್ಲಾಯೀಸ್ ಇದ್ದಾರೆ, ಎಷ್ಟು ಎಲಕ್ಟ್ರಿಕಲ್ ಬಿಲ್ ಇದೆ, ಇದೇ ಪ್ರಶ್ನೆಯಲ್ಲಿ ನಾವು ಏನಾದರೂ ಕೇಳಬಹುದು.

ಡಾ: ಹೆಚ್.ಸಿ.ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾಧುಸ್ವಾಮಿಯವರು ಹೇಳುವುದರಲ್ಲಿ ಅರ್ಥ ಇದೆ. ಪ್ರಶ್ನೆ ಎಕ್ಸಾಸ್ಟೀವ್ ಆಗಿ ಕೇಳಿದರೆ ಯಾವ ಪ್ರಶ್ನೆಗೆ ಅಟೆಂಡ್ ಮಾಡುವುದು ಎಂಬ ಬಗ್ಗೆ ತೊಂದರೆಯಾಗುತ್ತದೆ ನಿಜ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧ್ಯಕ್ಷರು ಇಲ್ಲ ಅಲೋ ಮಾಡಿ ಆಗಿದೆ, ಪ್ರಶ್ನೆ ಬಂದು ಆಗಿದೆ. ಈ ಸ್ಟೇಜ್‌ನಲ್ಲಿ ಅಲ್ಲ ಅವರು ಮಾತನಾಡುವುದು.

Sri J.C.Madhuswamy : There is a rule.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಪ್ರತಿಯೊಂದಕ್ಕೂ ಮಾನ್ಯ ಮಾಧುಸ್ವಾಮಿಯವರು ಎದ್ದು ನಿಲ್ಲುತ್ತಾರೆ. ಉಪದೇಶವೇದಾಂತ ಮಾತನಾಡುತ್ತಾರೆ.

ಡಾ: ಹೆಚ್.ಸಿ.ಮಹಾದೇವಪ್ಪ : ಕೆಲವು ಪ್ರಶ್ನೆಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಸಮಗ್ರವಾದ ಉತ್ತರಗಳಿವೆ. ಅಲ್ಲಿ ಉತ್ತರ ಸಿಗದೇ ಇದ್ದಾಗ ಇಲ್ಲಿ ಕೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶ ಇದೆ. ಎಲ್ಲಾ ವಿಧವಾದ ಅಧಿಕಾರ ಹಕ್ಕೂ ಇದೆ. ಅಲ್ಲಿ ಉತ್ತರ ಸಿಗತಕ್ಕಂತಹವರು ಇಲ್ಲಿ ಪ್ರಶ್ನೆ ಕೇಳುವುದು ಸೂಕ್ತ ಏನಿದೆ ಎಂಬುದನ್ನೂ ನೀವು ಆಲೋಚನೆ ಮಾಡಬೇಕು. ನಾನೇನು ಉಪದೇಶವೂ ಹೇಳುವುದಿಲ್ಲ. ಎಷ್ಟು ಪ್ರಶ್ನೆಗಳನ್ನು ಕೇಳಿದರೂ ನಾನು ಉತ್ತರ ಕೊಡುವುದಕ್ಕೆ ತಯಾರಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸಚಿವರಿಗೆ ನಾನು ಕೈ ಮುಗಿದು ಒಂದೇ ಪಾಯಿಂಟ್ ಕೇಳುತ್ತೇನೆ. ಈ ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಬರುತ್ತಿದೆ, ತಾವು ಅಮೌಂಟ್ ಬಿಡುಗಡೆ ಮಾಡಿದ್ದೀರಿ. ನಾನು ನೇರವಾಗಿ ಒಂದು ಮಾತು ಕೇಳುತ್ತೇನೆ, ನೀವು ಐದು ಲಕ್ಷ ರೂಪಾಯಿ ಪೂರ್ಣ ಬಿಡುಗಡೆ ಹೋದ ವರ್ಷ ಕೂಡ ಮಾಡಿಲ್ಲ. ಈ ವರ್ಷವೂ ಬಿಡುಗಡೆ ಮಾಡಿಲ್ಲ, ಏಕೆ ಮಾಡಲಿಲ್ಲ? ನಿಮಗೆ ಇರುವ ತೊಂದರೆ ಏನು? ಎರಡನೆಯದು ಮಂಗಳೂರು ಮತ್ತು ಉಡುಪಿಯಲ್ಲಿ ವಿದ್ಯುತ್ ಬಾಕಿ ದುಡ್ಡು ಕಟ್ಟಿದ ಮೇಲೆ ಸಹ ಕಣ್ಣು ಮುಚ್ಚಿಕೊಂಡು ಅದನ್ನು ಕಟ್ ಮಾಡಿದ್ದೀರಿ. ಇದು ಹೌದೋ ಅಲ್ಲ, ಅಷ್ಟೇ ನಾನು ಉತ್ತರ ಕೇಳುವುದು.

ಡಾ.ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳಿಂದ ವಿದ್ಯುಚ್ಛಕ್ತಿ ಬಾಕಿ ಹಣವೆಂದು ಸುಮಾರು 400 ಕೋಟಿ ರೂ.ಗಳಿಗೂ ಹೆಚ್ಚು

ಹಣವನ್ನು ಕಟ್ಟಬೇಕಾಗಿತ್ತು. ಹಣಕಾಸಿನ ಇಲಾಖೆ ಮತ್ತು ನಮ್ಮ ಇಲಾಖೆ ಚರ್ಚೆ ಮಾಡಿ ಗ್ರಾಮೀಣ ಪ್ರದೇಶಗಳಲ್ಲಿ ಬೀದಿ ದೀಪಗಳಿಗಾಗಿ ಕಟ್ಟಬೇಕಾಗಿದ್ದ ಬಾಕಿಯನ್ನು ಒಂದು ಸಾರಿ ಸೆಟ್ಲ್‌ಮೆಂಟ್ ಮಾಡಬೇಕೆಂದು ಹೇಳಿ ಸುಮಾರು 180 ಕೋಟಿ ರೂಪಾಯಿಗಳನ್ನು ಒಂದು ಸಾರಿ ಕೊಟ್ಟೆವು. ಇನ್ನು 257 ಕೋಟಿ ರೂಪಾಯಿ ಬಾಕಿ ಉಳಿಯಿತು. ಈ ಬಾಕಿ ಹಣವನ್ನು ನಾವು ಹಂತ ಹಂತವಾಗಿ ಕಟ್ಟಿಕೊಡುತ್ತೇವೆ, ನಿಮಗೆ 5 ಲಕ್ಷ ರೂಪಾಯಿಯಲ್ಲಿ ನಾವು ಕಟ್ ಮಾಡುತ್ತೇವೆ ಎಂದು ಹೇಳಲಿಲ್ಲ. ಆ ಗ್ರಾಮ ಪಂಚಾಯತಿಗಳು ಸದೃಢವಾಗಿ ಕೆಲಸ ಮಾಡಬೇಕಾದರೆ ಮತ್ತು ನಾಗರಿಕ ಸವಲತ್ತುಗಳನ್ನು ಕೊಡಬೇಕಾದರೆ ಗ್ರಾಂಟ್ ಬಳಸಿಕೋಡು ಅವರೂ ಕೂಡ ತಮ್ಮ ಸಂಪನ್ಮೂಲವನ್ನು ಕ್ರೋಢೀಕರಿಸಿ ವಾಟರ್ ಟ್ಯಾಕ್ಸ್, ಪವರ್ ಛಾರ್ಜ್ ...

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸಚಿವರೆ, ಉಡುಪಿ ಹಾಗೂ ಮಂಗಳೂರು ಕಡೆಗಳಲ್ಲಿ ಸ್ಟ್ರೀಟ್ ಲೈಟ್‌ಗೆ ದುಡ್ಡನ್ನು ಪಂಚಾಯತಿಯವರು ಕಟ್ಟಿದ್ದಾರೆ. ನಮಗೆ ಅರ್ಥ ಮಾಡಿಕೊಳ್ಳುವ ಶಕ್ತಿ ಇದೆ. ನೀವು ಉತ್ತರ ಕೊಡಿ. ಉಡುಪಿ, ಮಂಗಳೂರಿನಲ್ಲಿ ಪಂಚಾಯತಿಯವರು ದುಡ್ಡು ಕಟ್ಟಿದ್ದಾರೆ. ಅದನ್ನು ಮುರಿದುಕೊಂಡಿದ್ದೀರೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಿ.

ಡಾ: ಹೆಚ್.ಸಿ.ಮಹದೇವಪ್ಪ : ಈಗ Coming to the point. ಸಾರ್ವಜನಿಕವಾಗಿ ಜನರಲ್ ಆಗಿ ಒಂದು ಡಿಸಿಶನ್‌ನ್ನು ಮಾಡಿದೆವು. ಯಾವ ಯಾವ ಪಂಚಾಯತಿಗಳವರು ಮೊದಲೇ ಹಣವನ್ನು ಕಟ್ಟಿಬಿಟ್ಟಿದ್ದಾರೋ ಅದನ್ನು ರಿಕನ್ಸೀಲಿಯೇಷನ್ ಮಾಡಿ ಅವರಿಗೆ ಹಣವನ್ನು ಒದಗಿಸುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಕಣ್ಣು ಮುಚ್ಚಿಕೊಂಡು ಏಕೆ ರದ್ದು ಮಾಡಿದಿರಿ ಅವನು ಹಣವನ್ನು ಜಮಾ ಮಾಡಿದ ಮೇಲೆ ಪ್ರಾಮಾಣೀಕವಾಗಿ ಆ ಪಂಚಾಯತಿ ಕೆಲಸ ಮಾಡುವುದೇ ಅಪರಾಧವೇನು? ಡಾ.ಹೆಚ್.ಮಹದೇವಪ್ಪ ಜನರಲ್ ಡಿಸಿಷನ್ ಅಂತ ಮಾಡಿದಿರಿ. ನೀವು ಜನರಲ್ ಡಿಸಿಶನ್ ಹಣ ಕಟ್ಟಿದವರಿಗೆ ಮಾಡುತ್ತೀರಿ? ಹಣ ಕಟ್ಟಿದವರಿಗೆ ಹೇಗೆ ಜನರಲ್ ಡಿಸಿಶನ್ ಮಾಡುತ್ತೀರಿ? ಅಧಿಕಾರಿಗಳೇನು ಕತ್ತೆ ಕಾಯುತ್ತಾರೇನು? ಏನ್ ಉತ್ತರ ಕೊಡುತ್ತೀರಿ ನೀವು?

ಡಾ: ಹೆಚ್.ಸಿ.ಮಹದೇವಪ್ಪ : ಅವರು ಕಟ್ಟಿದ್ದರೆ 9 ಲಕ್ಷ ರೂಪಾಯಿಗಳನ್ನು ವಾಪಸ್ಸು ಕೊಡುವುದು ಆಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅಲ್ಲಿಯವರೆಗೂ ಅಭಿವೃದ್ಧಿ ಕೆಲಸಗಳು ಆ ಸಣ್ಣ ಪಂಚಾಯತಿಯಲ್ಲಿ ಹೇಗಾಗಬೇಕು ಹೇಳಿ.

ಅಧ್ಯಕ್ಷರು: ಮಾನ್ಯ ಸಚಿವರೆ, ಹೊಸದಾಗಿ ತಾವು ಈ ಖಾತೆಯನ್ನು ವಹಿಸಿಕೊಂಡಿದ್ದೀರಿ. ನೀವು ಅಧಿಕಾರಿಗಳಿಗೆ ಸರಿಯಾದ ಮಾಹಿತಿಗಳನ್ನು ಕೊಡುವುದಕ್ಕೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅವರು ನೇರವಾದ ನನ್ನ ಪ್ರಶ್ನೆಗೆ ನೇರವಾಗಿ ಉತ್ತರಕೊಡದೇ ಸುತ್ತಿ ಬಳಸಿ ಹೇಳುತ್ತಿದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, 5 ಲಕ್ಷ ರೂಪಾಯಿಗಳಲ್ಲಿ ಇನ್ನೂ 0.83 ಲಕ್ಷ ರೂಪಾಯಿಗಳನ್ನು ಮಾತ್ರ ಒಂದು ಗ್ರಾಮ ಪಂಚಾಯತಿಗೆ ಕೊಡಬೇಕು. ಅದನ್ನು ಆದಷ್ಟು ಬೇಗ ಅಂದರೆ ಈ ತಿಂಗಳು ಮುಗಿಯುವುದರೊಳಗೆ ಬಿಡುಗಡೆ ಮಾಡುತ್ತೇವೆ. ಅವರಿಗೆ ಏನು 5